# ಶಿಕ್ಷಕರಿಗಾಗಿ ಸೂಚನೆಗಳು

## ಐದನೆಯ ತರಗತಿ – ಪ್ರಥಮಭಾಷೆ ಕನ್ನಡ

ಸೇತುಬಂಧ ಕಾರ್ಯಕ್ರಮ ಶಿಕ್ಷಕರಿಗೆ ಚಿರಪರಿಚಿತವಾಗಿದ್ದರೂ ಈ ಸಾಲಿನ 45 ದಿನಗಳ ಸೇತುಬಂಧ ನಾವೀನ್ಯ ಹಾಗೂ ಸವಾಲಿನಿಂದ ಕೂಡಿದೆ. ಕರೋನಾ ಮಹಾಮಾರಿಯಿಂದ ಒಂದು ಶೈಕ್ಷಣಿಕ ವರ್ಷ ವಿದ್ಯಾರ್ಥಿಗಳಿಗೆ ತಮ್ಮ ಸಾಮರ್ಥ್ಯ ಗಳಿಸಿಕೊಳ್ಳಲು ಅಸಾಧ್ಯವಾಗಿದೆ. ಹಿಂದಿನ ಎರಡು ತರಗತಿಗಳ ಸಾಮರ್ಥ್ಯಗಳನ್ನು ಆಧಾರವಾಗಿಟ್ಟುಕೊಂಡು ಪ್ರಸ್ತುತ ತರಗತಿಗೆ ಸಮರ್ಥ ವಿದ್ಯಾರ್ಥಿಗಳನ್ನು ತರುವುದೇ ಈ ಕಾರ್ಯಕ್ರಮದ ಗುರಿಯಾಗಿದೆ. ಇದು ಶಿಕ್ಷಕರಿಗೆ ಒಂದು ರೀತಿಯ ಸವಾಲು ಹಾಗೂ ತಮ್ಮಲ್ಲಿರುವ ವಿಶೇಷ ಬುದ್ಧಿಶಕ್ತಿಯನ್ನು ಬಳಸಿಕೊಳ್ಳುವ ವೇದಿಕೆಯಂತಾಗಿದೆ. 'ಬಂಧ'ದಲ್ಲಿ ಕಳೆದೆರಡು ತರಗತಿಗಳ ಸಾಮರ್ಥ್ಯವನ್ನು ಗಳಿಸಿಕೊಂಡು ಹೊಸ ಸಾಮರ್ಥ್ಯಗಳಿಸಿಕೊಳ್ಳುವತ್ತ ದಿಟ್ಟ ಹೆಜ್ಜೆಯಿಡುವಂತಾಗುತ್ತಾರೆ. ಈ ನಿಟ್ಟಿನಲ್ಲಿಯೇ ಈ ಕಾರ್ಯಕ್ರಮವು ರೂಪಿತವಾಗಿದೆ.

- ಸೇತುಬಂಧ ಸಾಹಿತ್ಯದಲ್ಲಿ ನೀಡಿರುವ ಚಟುವಟಿಕೆಗಳ ಪಟ್ಟಿ ಒಂದು ಮಾದರಿ ಅಷ್ಟೇ. ಸದರಿ ಕಲಿಕಾ ಫಲವನ್ನು ಮಕ್ಕಳಲ್ಲಿ ಬೆಳೆಸಲು ಶಿಕ್ಷಕರು ಪೂರಕ / ಸ್ಥಳೀಯ ಅಗತ್ಯ ಚಟುವಟಿಕೆಗಗಳನ್ನು ರೂಪಿಸಿಕೊಳ್ಳಲು ಶಿಕ್ಷಕರು ಸ್ವತಂತ್ರರಾಗಿರುತ್ತಾರೆ.
- ಪ್ರತಿ ದಿನದ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲು ಕೆಲವೊಂದು ಸಿದ್ದತೆಗಳು, ಸಂಪನ್ಮೂಲಗಳು ಹಾಗೂ ಪಾಠೋಪಕರಣಗಳ ಸಿದ್ದತೆ ಅಗತ್ಯವಿದ್ದು, ಶಿಕ್ಷಕರು ಈ ಕುರಿತು ಅಗತ್ಯ ಕ್ರಮವಹಿಸಿಬೇಕಾಗಿರುತ್ತದೆ.
- ಶಿಕ್ಷಕರಿಗೆ ಸಲಹಾತ್ಮಕ ಚಟುವಟಿಕೆಗಳನ್ನು ನೀಡಿದ್ದು, ಅದರಲ್ಲಿ ಕೆಲವಕ್ಕೆ ವಿವರಣೆ ನೀಡಲಾಗಿದೆ. ಅದನ್ನು ಅನುಸರಿಸಿ ಉಳಿದ ಚಟುವಟಿಕೆಗಳನ್ನು ಕೈಗೊಳ್ಳುವುದು.

ಐದನೇ ತರಗತಿ　　　　　　　　　　ಪ್ರಥಮ ಭಾಷೆ ಕನ್ನಡ　　　　　　　　　　'ಬಂಧ' ಸಾಹಿತ್ಯ

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಯ ನಿರ್ವಹಣೆಗೆ ಸೂಚನೆಗಳು |
|---|---|---|---|---|
| 1. | **ಕ್ಷೇತ್ರ – ಆಲಿಸುವುದು**<br><br>1. ಸರಳ ಚಟುವಟಿಕೆಗಳನ್ನು ಕಾರ್ಯರೂಪಕ್ಕೆ ತರುವ ಬಗ್ಗೆ ಮೌಖಿಕ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುವರು. | * ಮೌಖಿಕ ಸೂಚನೆಗಳನ್ನು ಅರ್ಥ ಮಾಡಿಕೊಳ್ಳುತ್ತಾರೆ. | 1.1 – ಕಳ್ಳ-ಪೊಲೀಸ್<br><br>1.2- ಕುಂಟೆಬಿಲ್ಲೆ | 1.1 - ಶಿಕ್ಷಕರು ಮೊದಲು ಕಳ್ಳ-ಪೊಲೀಸ್ ಆಟದ ನಿಯಮಗಳನ್ನು ಮಕ್ಕಳಿಗೆ ಸ್ಪಷ್ಟವಾಗಿ ಮೌಖಿಕವಾಗಿ ವಿವರಿಸುವುದು. ಇಲ್ಲಿ ಪೊಲೀಸ್ ಬಂದವರು ಕಳ್ಳನನ್ನು ಕಂಡುಹಿಡಿದು ಹೇಳಬೇಕು. ಹೇಳದಿದ್ದಲ್ಲಿ, ಆ ಮಗುವು ತನಗೆ ತಿಳಿದಿರುವ ಯಾವುದಾದರೂ ಶೈಲಿಯ ಒಂದು ಹಾಡನ್ನು ಹಾಡಬೇಕು. ಸರಿಯಾಗಿ ಕಂಡುಹಿಡಿದರೆ ಕಳ್ಳ ಚೀಟಿ ಬಂದಿರುವ ಮಗು ಹಾಡನ್ನು ಹಾಡಬೇಕು. ನಂತರ ಎಲ್ಲರೂ ಗುಂಪಿನಲ್ಲಿ ಹಾಡಬೇಕು.<br>1.2 – ಇದೇ ಮಾದರಿಯಲ್ಲಿ ಕುಂಟೆಬಿಲ್ಲೆ ಆಟವನ್ನು ತಪ್ಪಾದ ಮನೆಗೆ ಕಲ್ಲು ಎಸೆಯುವ ಮಗುವು ತನಗೆ ತಿಳಿದ ಮತ್ತೊಂದು ಆಟದ ಬಗ್ಗೆ ವಿವರಿಸಲು ಹೇಳಬೇಕು. |
| 2. | | * ಗೊಂದಲವಿಲ್ಲದೆ ಆಟದ ನಿಯಮಗಳನ್ನು ಅರಿಯುತ್ತಾರೆ. | 2.1- ಚದುರಂಗದ ಕಾಯಿಗಳ ಪಾತ್ರ.<br><br>2.2- ಚೌಕಾಬಾರ.<br><br>2.3 – ಲೂಡೋ/ಪಗಡೆ. | 2.1 – ಚದುರಂಗದ ಕಾಯಿಗಳನ್ನು ನಡೆಸುವ ನಿಯಮಗಳನ್ನು ಶಿಕ್ಷಕರು ತಿಳಿಸುವುದು ಹಾಗೇ ಇದನ್ನು ವರ್ಣಮಾಲೆಯ ಕಲಿಕೆಗೆ ಹೊಂದಿಸಿಕೊಳ್ಳುವುದು.<br>2.2 – ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಭಾಗಿಸಿ ಬೇರೆ ಬೇರೆ ವಿಧದ ಆಟಗಳನ್ನು ಆಡಲು ತಿಳಿಸುವುದು ಹಾಗೂ ಗೊಂದಲವಿಲ್ಲದೇ ಆಟದ ನಿಯಮಗಳನ್ನು ಅರಿತು ಪಾಲಿಸುವಂತೆ ಶಿಕ್ಷಕರು ಅನುಕೂಲಿಸುವುದು.<br>2.3 - ಪ್ರತೀ ಚೌಕದಲ್ಲೂ ಒಂದೊಂದು ಅಕ್ಷರಗಳನ್ನು ಬರೆದು ಆ ಚೌಕಕ್ಕೆ ಕಾಯಿ ಬಂದಾಗ ಆ ಅಕ್ಷರದ 5 ಪದಗಳನ್ನು ಹೇಳಲು ತಿಳಿಸುವುದು. |

| | | | | |
|---|---|---|---|---|
| 3. | | * ನಿಯಮಗಳನ್ನು ಅರಿತು ವೈಯಕ್ತಿಕವಾಗಿ/ಗುಂಪಿನಲ್ಲಿ ಆಡುತ್ತಾರೆ. | 3.1 – ಮುದ್ದು ಮರಿ ಚಿತ್ರ ಬರಿ.<br><br>3.2 – ನನ್ನ ಆಟ ನನ್ನ ತೀರ್ಪು.<br><br>3.3 – ನವೋಲ್ಲಾಸ | 3.1 – ವಿದ್ಯಾರ್ಥಿಯು ತನಗೆ ತಿಳಿಸಿರುವ ಯಾವುದಾದರೂ ಒಂದು ಆಟದ ಮಾದರಿಯ ಚಿತ್ರವನ್ನು ಹಾಳೆಯಲ್ಲಿ ಬರೆದು ಆ ಆಟದ ನಿಯಮಗಳನ್ನು ಹೇಳುವಂತೆ ಶಿಕ್ಷಕರು ಪ್ರೋತ್ಸಾಹಿಸುವುದು.<br>3.2 – ಮಗುವು ತಾನು ಬರೆದು ತಂದ ಆಟವನ್ನು ಆಡುವ ಬಗ್ಗೆ ಮತ್ತು ಅದರ ನಿಯಮಗಳ ಬಗ್ಗೆ ಸಹಪಾಠಿಗಳಿಗೆ ತಿಳಿಸುವುದು. ನಂತರ ತಾನು ತೀರ್ಪುಗಾರನಾಗಿ ಇತರ ಮಕ್ಕಳನ್ನು ಆಟವಾಡಲು ನೀಡುವುದು.<br>3.3 – ವಿದ್ಯಾರ್ಥಿಗಳು ಆಟವಾಡಿದ ಮೇಲೆ ಎಲ್ಲರೂ ಸೇರಿ ಮತ್ತೊಂದು ಹೊಸದೊಂದು ಆಟವನ್ನು ತಮ್ಮದೇ ಆದ ನಿಮಯಗಳ ಮೂಲಕ ರಚಿಸಲು ಶಿಕ್ಷಕರು ಅವಕಾಶ ಕಲ್ಪಿಸುವುದು. |
| 4. | 2. ಕಥನ ವಿವರಣೆ ಮತ್ತು ಒಗಟುಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವುದು. | * ಕಥೆಗಳನ್ನು ಕಟ್ಟಿ ಹೇಳುತ್ತಾರೆ.<br><br>* ಕಥೆಗಳನ್ನು ಆಲಿಸುವವರು ಏನು? ಏಕೆ? ಹೇಗೆ? ಎಂಬ ಪ್ರಶ್ನೆಗಳಿಗೆ ಉತ್ತರಿಸುತ್ತಾರೆ. | 4.1 – ಚಂದಮಾಮ<br><br>4.2 – ಕಥೆಯ ಜಾದೂಲೋಕ. | 4.1 – ಮಕ್ಕಳು ತಮ್ಮ ರಜಾ ಅವಧಿಯಲ್ಲಿ ತಾವು ಕೇಳಿದ / ಓದಿದ ಕಥೆಗಳನ್ನು ಹೇಳಲು ಪ್ರೇರೇಪಿಸುವುದು. ನಂತರ ಶಿಕ್ಷಕರು ಅದು ಹೇಗೆ? ಏಕೆ? ಎಂಬುದಾಗಿ ಪ್ರಶ್ನಿಸಿ ಎಲ್ಲಾ ಮಕ್ಕಳನ್ನು ಕಥೆಯ ಬಗ್ಗೆ ಕುತೂಹಲ ಮೂಡುವಂತೆ ಅನುಕೂಲಿಸುವುದು.<br>4.2 – ಕಥೆಗಳಲ್ಲಿ ಪ್ರಾಣಿಗಳು, ಪಕ್ಷಿಗಳು ಮಾತನಾಡುವಂತೆ ಕಲ್ಪಿಸುತ್ತೇವೆ? ಏಕೆ? ಇದರಿಂದ ಏನು ಪ್ರಯೋಜನವಿದೆ? ಎಂದು ಮಕ್ಕಳಿಂದಲೇ ಹೇಳಿಸುವುದು. |
| 5. | | | 5.1 – ಗೆಳೆಯರ ಕಥಾಲೋಕ<br><br>5.2 – ಕಥಾಸಂಗಮ | 5.1 – ಮಕ್ಕಳೆಲ್ಲರೂ ತಾವು ಕೇಳಿದ, ಓದಿದ ಕಥೆಯೊಂದನ್ನು ಬರೆದುಕೊಂಡು ಬರಲು ತಿಳಿಸಿ ಅದನ್ನು ಒಟ್ಟುಗೂಡಿಸಿ ಮಕ್ಕಳಿಂದಲೇ ಅವರದೇ ತರಗತಿಯ ಒಂದು 'ಗೆಳೆಯರ ಕಥಾಲೋಕ' ಎಂಬ ಪುಸ್ತಕವೊಂದನ್ನು ತಯಾರಿಸಲು ಅನುಕೂಲಿಸುವುದು.<br>5.2 – ಮಕ್ಕಳ ಕಥೆಗಳನ್ನು ಸಂಗ್ರಹಿಸಿ ಅದನ್ನು ಅದಲು ಬದಲು ಮಾಡಿ ಮಕ್ಕಳಿಂದ ಓದಿಸುವುದು. |

| | | | | |
|---|---|---|---|---|
| 6. | | * ಒಗಟುಗಳನ್ನು ಬಿಡಿಸುತ್ತಾರೆ ಮತ್ತು ಸ್ವತಃ ರಚಿಸುತ್ತಾರೆ. | 6.1- ಒಗಟು-ಒಬ್ಬಟ್ಟು<br><br>6.2 – ನಾನು ಒಂದು ಒಡೆದರೆ ನೂರು.<br><br>6.3 – ಸತ್ಯದ ಸರದಾರ | 6.1 – ಶಿಕ್ಷಕರು ಒಂದು ಮಗುವಿನಿಂದ ಅವರ ಮನೆಯಲ್ಲಿ ವಿಶೇಷವಾದ ಸಿಹಿ/ಖಾರ ತಿಂಡಿಯನ್ನು ಹೇಗೆ ತಯಾರಿಸುತ್ತಾರೆ ಎಂಬ ಬಗೆಯನ್ನು ಹೇಳಿಸುವುದು ಮತ್ತು ಇತರ ವಿದ್ಯಾರ್ಥಿಗಳು ಅದು ಯಾವ ತಿಂಡಿ ಎಂಬುದನ್ನು ಗುರುತಿಸಿ ಹೇಳಲು ತಿಳಿಸುವುದು.<br>6.2 – ಶಿಕ್ಷಕರು ಮೊದಲು ತಾವೇ ಮಕ್ಕಳಲ್ಲಿ ಕುತೂಹಲ ಮೂಡಿಸುವಂತಹ ಹಾಸ್ಯಭರಿತ ಉತ್ತರ ಬರುವಂತಹ ಒಗಟುಗಳನ್ನು ಕೇಳುವುದು.<br>6.3 – ನಂತರ ಶಿಕ್ಷಕರು ಮಕ್ಕಳಿಂದ ಒಗಟುಗಳನ್ನು ಹೇಳಿಸಿ ಉತ್ತರ ಪಡೆಯುವುದು. ಅವರಲ್ಲಿ ಅತೀ ಹೆಚ್ಚು ಸರಿ ಉತ್ತರ ನೀಡಿದ ವಿದ್ಯಾರ್ಥಿಗೆ ಸತ್ಯದ ಸರದಾರ ಎಂಬ ಬಿರುದು ನೀಡುವುದು.<br>(ಶಿಕ್ಷಕರು ಇತರ ಹೆಸರುಗಳನ್ನು ಬಳಸಬಹುದು) |
| 7. | **ಕ್ಷೇತ್ರ : ಮಾತನಾಡುವುದು**<br>3. ಪರಿಚಿತ/ಅಪರಿಚಿತ ವಸ್ತು/ಘಟನೆಗಳ ಬಗ್ಗೆ ವಿವರಿಸುವರು. | * ಪರಿಚಿತ ವಸ್ತುಗಳ ಬಗ್ಗೆ ಮಾತನಾಡುತ್ತಾರೆ. | 7.1 – ವರ್ಣ ವಿಸ್ತಾರ<br><br>7.2 – ನೀನ್ಯಾರು?<br><br>7.3 – ಸಮಸ್ಯೆಗೊಂದು ದಾರಿ. | 7.1 – ಶಿಕ್ಷಕರು ಒಂದು ಡಬ್ಬಿಯಲ್ಲಿ ವರ್ಣಮಾಲೆಯ ಪ್ರತೀ ಅಕ್ಷರವನ್ನು ಚೀಟಿಗಳಲ್ಲಿ ಬರೆದು ಇಡುವುದು. ಎಲ್ಲಾ ವಿದ್ಯಾರ್ಥಿಗಳಿಗೂ ಹಂಚುವುದು, ತನಗೆ ಬಂದ ಚೀಟಿಯಲ್ಲಿನ ಅಕ್ಷರದಿಂದ ಆರಂಭವಾಗುವ 10 ಪದಗಳನ್ನು ಹೇಳುವುದು ಹಾಗೂ ಅದರಲ್ಲಿ ಒಂದರ ಬಗ್ಗೆ ವಿಸ್ತಾರವಾಗಿ ಮಾತನಾಡಲು ತಿಳಿಸುವುದು.<br>7.2 – ಶಿಕ್ಷಕರು ಮಕ್ಕಳಿಗೆ ವಿಶೇಷವಾದ ಪ್ರಾಣಿ/ಪಕ್ಷಿಗಳ ಚಿತ್ರಗಳನ್ನು ನೀಡಿ ಅದರ ಬಗ್ಗೆ ಮಾತನಾಡಲು ಪ್ರೋತ್ಸಾಹಿಸುವುದು.<br>7.3 – ಶಿಕ್ಷಕರು ಕಲ್ಪಿತ ಸಮಸ್ಯೆಯೊಂದನ್ನು ಮಕ್ಕಳಿಗೆ ನೀಡಿ ಅದಕ್ಕೆ ಪರಿಹಾರ ಸೂಚಿಸುವಂತೆ ಹೇಳುವುದು.<br>ಉದಾ : ರೈತರ ಭಿತ್ತನೆ ಬೀಜ ಕೊರತೆ, ಪೂಜೆಗೆ ಹೂವಿನ ಸಂಗ್ರಹ. |

| | | | | |
|---|---|---|---|---|
| 8. | | * ಅಪರಿಚಿತ ಘಟನೆಗಳು ಎದುರಾದಾಗ ಅದನ್ನು ಎದುರಿಸುವುದನ್ನು ಅರಿಯುತ್ತಾರೆ. | 8.1 – ಚಿತ್ರ ನೋಡಿ ಸಲಹೆ ನೀಡು.<br><br>8.2 - ಸ್ವಯಂಭು | 7.2 – ಶಿಕ್ಷಕರು ಯಾವುದಾದರೂ ಒಂದು ಘಟನೆಗೆ ಸಂಬಂಧಿಸಿದ ಚಿತ್ರಪಟವೊಂದನ್ನು ಪ್ರದರ್ಶಿಸುವುದು. ನಂತರ ವಿದ್ಯಾರ್ಥಿಗಳನ್ನು ಗುಂಪುಗಳಾಗಿ ವಿಗಂಡಿಸಿ, ಆ ಚಿತ್ರದ ಪರಿಸ್ಥಿತಿಗೆ ಹೊಂದುವ ಸೂಕ್ತ ಸಲಹೆಗಳನ್ನು ನೀಡಲು ತಿಳಿಸುವುದು.<br>**ಉದಾ :** ಮಕ್ಕಳು ನದಿಯಲ್ಲಿ ಆಟವಾಡುವುದು, ವಿದ್ಯುತ್ ಶಾಕ್, ನೀರುತುಂಬಿ ಹರಿಯುತ್ತಿರುವ ಬಿಂದಿಗೆ, ಅಮ್ಮನ ಅಡುಗೆ ತಯಾರಿ.<br><br>8.2 – ಕೋವಿಡ್ ನಂತರ ಕಾಯಿಲೆಗಳು ಎದುರಾದಾಗ ನಾವು ಹೇಗೆ ಇರಬೇಕು? ಎಂಬುದನ್ನು ಮಕ್ಕಳು ತಮ್ಮ ರಜಾ ಅವಧಿಯಲ್ಲಿ ಅವರು ಪಾಲಿಸಿದ ನಿಯಮಗಳನ್ನು ಹೇಳಲು ಶಿಕ್ಷಕರು ತಿಳಿಸುವುದು. |
| 9. | | * ಘಟನೆಗಳನ್ನು ಅರಿತು ವಿವರಿಸುತ್ತಾರೆ. | 9.1 – ನಮ್ಮ ಸಮಾರಂಭ<br><br>9.2 – ನಾನವನಾದರೆ?<br><br>9.3 – ಪರಿಸರ ಅಳಿವು-ಉಳಿವು ಮಾನವನಿಂದ. | 9.1 – ಶಿಕ್ಷಕರು ಇಡೀ ತರಗತಿಗೆ ಶಾಲೆಯಲ್ಲಿ ನಡೆಸಬೇಕಾಗಿರುವ ಯಾವುದಾದರೊಂದು ಸಮಾರಂಭದ ಪೂರ್ಣ ವ್ಯವಸ್ಥೆಯನ್ನು ಮಾಡುವಂತೆ ವಹಿಸುವುದು ನಂತರ ಅವರೇ ತಮ್ಮ ನಾಯಕನನ್ನು ಆರಿಸಿಕೊಂಡು, ತಂಡಗಳಲ್ಲಿ ಕೆಲಸಗಳನ್ನು ಹಂಚಿಕೊಳ್ಳುವಂತೆ ನಂತರ ವ್ಯವಸ್ಥೆ ಪೂರ್ಣಗೊಳಿಸುವಂತೆ ಅನುಕೂಲಿಸುವುದು.<br>9.2 – ಶಿಕ್ಷಕರು ಶಾಲಾ ಮಂತ್ರಿಮಂಡಲದ ರೀತಿಯಲ್ಲಿ ತರಗತಿಯ ಮಕ್ಕಳಿಗೆ ಮಂತ್ರಿ ಪದವಿಗಳನ್ನು ನೀಡುವುದು. ನಂತರ ನಾನು ಆ ಮಂತ್ರಿಯಾದರೆ ಪ್ರಸ್ತುತ ಸನ್ನಿವೇಶದಲ್ಲಿ ಶಾಲೆ ಆರಂಭವಾದರೆ ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತೇನೆ ಎಂದು ವಿವರಿಸಲು ಅವಕಾಶ ಕಲ್ಪಿಸುವುದು.<br>**ಉದಾ :** ಆರೋಗ್ಯಮಂತ್ರಿ, ಶಿಕ್ಷಣಮಂತ್ರಿ, ಮುಖ್ಯಮಂತ್ರಿ, ಹಣಕಾಸುಮಂತ್ರಿ ಇತ್ಯಾದಿ. |

| | | | | |
|---|---|---|---|---|
| 10. | 4. ಪಠ್ಯ ಮತ್ತು ಆಡುಭಾಷೆಗಳ ನಡುವಿನ ವ್ಯತ್ಯಾಸವನ್ನು ಗುರುತಿಸಿ ಮಾತನಾಡುವರು. | * ಆಡುಭಾಷೆಯ ಪದಗಳ ರಚನೆಯನ್ನು ಗುರುತಿಸುತ್ತಾರೆ. | 10.1 – ತೋಟದ ಮನೆ<br><br>10.2 – ಸಂಭಾಷಣೆ | 10.1 – ಶಿಕ್ಷಕರು ಮಕ್ಕಳನ್ನು ವಿವಿಧ ಗುಂಪುಗಳಾಗಿ ವಿಗಂಡಿಸಿ ಪ್ರತೀ ಗುಂಪಿಗೂ ಬೇರೆ ಬೇರೆ ಪರಿಸ್ಥಿತಿಗಳುಳ್ಳ ವಿಷಯವನ್ನು ನೀಡುವುದು ನಂತರ ವಿದ್ಯಾರ್ಥಿಗಳು ಅದನ್ನು ಗುಂಪಿನಲ್ಲಿ ಚರ್ಚಿಸಿ ವಿಷಯ ಮಂಡನೆಗೆ ಮಾಡಲು ಅವಕಾಶ ನೀಡುವುದು.<br>ಉದಾ : ಶಾಲಾಕೈತೋಟ, ಮಳೆ ಆಶ್ರಿತ ಜಮೀನಿನ ಬೆಳೆಗಳು, ಮರುಭೂಮಿ ಜೀವನ, ಆರೋಗ್ಯ ಕೇಂದ್ರದ ಸ್ವಚ್ಛತೆ. ಇತ್ಯಾದಿ.<br>10.2 – ವಿವಿಧ ಸನ್ನಿವೇಶಗಳನ್ನು ನೀಡಿ ಅದರಲ್ಲಿ ವಿದ್ಯಾರ್ಥಿಗಳು ಸಹಜವಾಗಿ ಸಂಭಾಷನೆ ನಡೆಸಲು ತಿಳಿಸುವುದು.<br>ಉದಾ : ರೋಗಿ-ಡಾಕ್ಟರ್, ಪ್ರಯಾಣಿಕ-ಕಂಡಕ್ಟರ್, ಅಮ್ಮ-ನಾನು, ನಾನು-ನನ್ನ ಬೆಕ್ಕು ಇತ್ಯಾದಿ. |
| 11. | | * ಪಠ್ಯಭಾಷೆಯ ಪದಗಳ ರಚನೆಯನ್ನು ಗುರುತಿಸುತ್ತಾರೆ. | 11.1- ನಾಟಕಾಭಿನಯ<br><br>11.2- ಪದ ಪ್ರಯೋಗ<br><br>11.3 - ಪದವಿನೋದ | 11.1- ಶಿಕ್ಷಕರು ಗ್ರಾಂಥಿಕ ಭಾಷೆಯ ಸಾಹಿತ್ಯ ಉಳ್ಳ ಸರಳ ಮಕ್ಕಳ ನಾಟಕವನ್ನು ಆಡಿಸುವುದು. ನಾಟಕದಲ್ಲಿ ಬಳಸಿರುವ ಪದಗಳ ರಚನೆಯನ್ನು ಗುರುತಿಸಲು ಅವಕಾಶ ಕಲ್ಪಿಸುವುದು.<br>11.2 – ಶಿಕ್ಷಕರು ಮಕ್ಕಳು ಅಭಿನಯಿಸಿದ ನಾಟಕದ ಸಾಹಿತ್ಯದಲ್ಲಿ ಅವರಿಗೆ ವಿಶೇಷವೆನಿಸುವಂತ ಪದಗಳನ್ನು ಪ್ರತ್ಯೇಕವಾಗಿ ಪಟ್ಟಿ ಮಾಡಿಸುವುದು. ಗಟ್ಟಿಯಾಗಿ ಓದುಸುವುದು.<br>11.3- ಮಕ್ಕಳು ಪಟ್ಟಿಮಾಡಿದ ಪದಗಳನ್ನು ಆಧರಿಸಿ ಪದಕೋಶ ರಚನೆ, ಪದಬಂಧಗಳ ರಚನೆ, ಪದ ಬಾಲಂಗೋಚಿ ಇತ್ಯಾದಿ ಚಟುವಟಿಕೆಗಳನ್ನು ಶಿಕ್ಷಕರು ಅನುಕೂಲಿಸುವುದು. |

| | | | | |
|---|---|---|---|---|
| 12. | | * ಆಡುಭಾಷೆಯ ಪದಗಳನ್ನು ಪಠ್ಯಭಾಷೆಗೆ, ಪಠ್ಯಭಾಷೆಯ ಪದಗಳನ್ನು ಆಡು ಭಾಷೆಗೆ ಬದಲಿಸುತ್ತಾರೆ. | 12.1 – ನಾಟ್ಕದಾಗ್ಪಾರ್ಟು<br><br><br>12.2 - ರೂಪ ಪ್ರತಿರೂಪ<br><br><br><br><br>12.3 - ವಾಕ್ಯರಚನೆ | 12.1 – ಶಿಕ್ಷಕರು ಮಕ್ಕಳು ಅಭಿನಯಿಸಿದ ಪಠ್ಯಭಾಷೆಯುಳ್ಳ ನಾಟಕವನ್ನು ಅವರ ಸಹಜ ಮಾತುಗಾರಿಕೆಯಲ್ಲಿ ಆಡು ಭಾಷೆಯ ರೂಪದಲ್ಲಿ ಅಭಿನಯಿಸಲು ಅವಕಾಶ ಕಲ್ಪಿಸುವುದು.<br>12.2- ಮಕ್ಕಳು ಪಠ್ಯಭಾಷೆಯ ಪದಗಳನ್ನು ಹೇಗೆ ಆಡು ಭಾಷೆಯ ಪದಗಳಾಗಿ ತಾವೇ ಪರಿವರ್ತಿಸಿಕೊಂಡರು ಎಂಬುದನ್ನು ಗಮನಿಸಿ ಅದನ್ನು ಮಕ್ಕಳ ಗಮನಕ್ಕೂ ತಂದು ಆ ಎರಡು ರೂಪದ ಪದಗಳನ್ನು ಪಟ್ಟಿಮಾಡಿಸಿ ಬರೆಸುವುದು.<br>12.3 – ಮಕ್ಕಳು ಪಟ್ಟಿಮಾಡಿದ ಪದಗಳನ್ನು ಬಳಸಿ ತಮ್ಮದೇ ಸ್ವಂತವಾಕ್ಯಗಳನ್ನು ರಚಿಸಲು ಅನುಕೂಲಿಸುವುದು. |
| 13. | 5. ಓದಿದ ಪಠ್ಯದಲ್ಲಿನ ಘಟನಾವಳಿಗಳಿಗೆ ಇರುವ ಸರಳ ಕಾರ್ಯ ಕಾರಣ ಸಂಬಂಧಗಳನ್ನು ಗುರುತಿಸಿ ಹೇಳುವರು | * ಓದಿದ ಘಟನೆಗಳನ್ನು ಅರ್ಥಮಾಡಿಕೊಳ್ಳುತ್ತಾರೆ. | 13.1 – ಹಾಡು ಬಾ ಕೋಗಿಲೆ<br><br>13.2- ನಾನ್ಯಾರೆ ಪುಟ್ಕಂಜಿ<br><br><br><br>13.3 – ದಾರಿ ತೋರಿಸು | 13.1 – ಶಿಕ್ಷಕರು ಎರಡು ಪಾತ್ರಗಳ ನಡುವೆ ಸಂಭಾಷಣೆಯ ರೂಪದಲ್ಲಿ ಇರುವ ಜಾನಪದ ಅಥವಾ ಬೇರೆ ಶೈಲಿಯ ಹಾಡುಗಳನ್ನು ಮಕ್ಕಳಿಂದ ಹಾಡಿಸಿ ನಂತರ ಹಾಡುತ್ತಾ ಅಭಿನಯಿಸಲು ಹೇಳುವುದು.<br>13.2- ಹಾಡಿನಲ್ಲಿ ಬರುವ ಪಾತ್ರಗಳನ್ನು ಪಟ್ಟಿ ಮಾಡಿಸುವುದು. ಆ ಹಾಡಿನಲ್ಲಿ ಬಂದಿರುವ ಘಟನೆ ಯಾವುದು? ಅದರ ವಿಶೇಷತೆ ಏನು? ಎಂಬುದಾಗಿ ಮಕ್ಕಳೊಂದಿಗೆ ಶಿಕ್ಷಕರು ಚರ್ಚಿಸುವುದು.<br>ಉದಾ : ಭಾಗ್ಯದ ಬಳೆಗಾರ, ಹಿಟ್ಟು ಮಾಡಿ ಸೊಪ್ಪು ಮಾಡಿ ಗೀತೆ.<br>13.3 – ಹಾಡಿದ ಹಾಡನ್ನು ಬರೆಸುವುದು ಮತ್ತು ಅದನ್ನು ಸರಳ ವ್ಯಾಕರಣಾಂಶಗಳನ್ನು ಗುರುತಿಸಲು ಶಿಕ್ಷಕರು ಸಮರ್ಥವಾಗಿ ಬಳಸಿಕೊಳ್ಳುವುದು.<br>ಉದಾ : ಗುಣಿತಾಕ್ಷರಗಳು, ಒತ್ತಕ್ಷರದ ವಿಧಗಳು, ಪ್ರಾಸ ಪದಗಳು, ವಿರುದ್ಧಾರ್ಥಕ ಪದಗಳು, ಬಿಡಿಸಿ ಬರೆಯಿರಿ ಇತ್ಯಾದಿ. |

| | | | | |
|---|---|---|---|---|
| **14.** | | * ಓದಿದ ಘಟನಾವಳಿಯಲ್ಲಿರುವ ವಿಚಾರ ಸರಣಿಗಳನ್ನು ಹೇಳುತ್ತಾರೆ. | 14.1 – ಸರಮಾಲೆ<br><br>14.2 – ವಿಚಾರ ಸರಣಿ<br><br>14.3 - ಅದ್ಯಾಕ್ಹಂತೆ | 14.1- ಮಕ್ಕಳು ತಾವು ಹಾಡಿದಂತ ಹಾಡನ್ನು ಕತೆಯ ರೂಪದಲ್ಲಿ ತಮ್ಮದೇ ಸ್ವಂತ ವಾಕ್ಯಗಳ ಮೂಲಕ ರಚಿಸಲು ಶಿಕ್ಷಕರು ಅನುಕೂಲಿಸುವುದು.<br>14.2 – ಶಿಕ್ಷಕರು ಮಕ್ಕಳೊಡನೆ ಸೇರಿ ಅವರು ಹಾಡಿದಂತಹ ಹಾಡಿನಲ್ಲಿ ಬರುವ ಸನ್ನಿವೇಶ ಯಾವುದು? ಅಲ್ಲಿ ಬರುವ ವಿವಿಧ ವಿಚಾರಗಳು ಯಾವುವು? ಯಾವ ವಿಷಯವಾಗಿ ಚರ್ಚೆ ನಡೆಯುತ್ತಿದೆ? ಎಂಬುದಾಗಿ ಸಂವಾದ ನಡೆಸುವುದು.<br>14.3 – ಹಾಡಿನಲ್ಲಿರುವ ಘಟನೆಗಳಿಗೂ ಅಲ್ಲಿ ಬರುವ ಪಾತ್ರಗಳಿಗೂ ಏನು ಸಂಬಂಧ ಎಂಬುದಾಗಿ ಚರ್ಚಿಸಲು ಶಿಕ್ಷಕರು ಅವಕಾಶ ಕಲ್ಪಿಸುವುದು. |
| **15.** | | * ವಿಚಾರ ಸರಣಿಗಳನ್ನು ಹೊಂದಿಸುತ್ತಾ ಕಾರ್ಯಕಾರಣ ಸಂಬಂಧಗಳನ್ನು ಅರ್ಥೈಸುತ್ತಾರೆ. | 15.1 – ಅವರ್ಬಿಟ್ ಇವರ್ಯಾರು?<br><br>15.2 – ನಾನಾದ್ ಮೇಲ್ ಯಾರು?<br><br>15.3 – ಹನಿಗವನಗಳು, ಜೋಕ್ಸ್ ಜಾತ್ರೆ. | 15.1- ಶಿಕ್ಷಕರು ಓದು ಕರ್ನಾಟಕ ಕಥಾಗುಚ್ಛದಲ್ಲಿರುವ ಕತೆಗಳನ್ನು ಬಳಸಿಕೊಂಡು ಮಕ್ಕಳಿಗೆ ಪಾತ್ರಗಳ ನಡುವೆ ಇರುವ ಸಂಬಂಧಗಳು ಅವುಗಳ ಪ್ರಾಮುಖ್ಯತೆಯ ಬಗ್ಗೆ ಮಾತನಾಡಲು ಅವಕಾಶ ಕಲ್ಪಿಸುವುದು.<br>15.2 – ಶಿಕ್ಷಕರು ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ಒಂದಕ್ಕೊಂದು ಸಂಬಂಧವಿರುವ 4 ರಿಂದ 6 ವಾಕ್ಯಗಳನ್ನು ಮಕ್ಕಳಿಗೆ ನೀಡುವುದು. ಮಕ್ಕಳು ಅವುಗಳನ್ನು ಓದಿಕೊಂಡು ಒಟ್ಟಾರೆಯಾಗಿ ಅರ್ಥೈಸಿಕೊಂಡು ಯಾವ ಘಟನೆ ನಂತರ ಯಾವ ಘಟನೆ ನಡೆಯುತ್ತದೆ ಎಂಬುದನ್ನು ಅರಿತುಕೊಂಡು ವಾಕ್ಯಗಳನ್ನು ಒಂದರ ನಂತರ ಒಂದು ಪುನರ್ ಜೋಡಿಸಲು ತಿಳಿಸುವುದು.<br>15.3 – ಶಿಕ್ಷಕರು ಮಕ್ಕಳಲ್ಲಿ ಆತ್ಮವಿಶ್ವಾಸ ಮೂಡಿಸಲು ಅನುಕೂಲವಾಗುವಂತೆ ವಿವಿಧ ಹಾಸ್ಯಭರಿತ ಚಟುವಟಿಕೆ ಕೈಗೊಳ್ಳುವುದು. |

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
| --- | --- | --- | --- | --- |
| **16** | **ಕ್ಷೇತ್ರ : – ಓದುವುದು**<br>• ವಿನೋದ ಚಿತ್ರ ಸರಣಿ ಮತ್ತು ಭಿತ್ತಿಪತ್ರಗಳನ್ನು ಓದುವುದು. | • ವಿನೋದ ಚಿತ್ರ ಸರಣಿಯನ್ನು ಸ್ಪಷ್ಟವಾಗಿ ತಪ್ಪಿಲ್ಲದಂತೆ ಓದುತ್ತಾರೆ. | ➢ ನನ್ನ ಕಥೆ ಓದುವೆಯಾ? | ➢ ಸರಳವಾದ ಆಕರ್ಷಕವಾದ ವಿನೋದ ಚಿತ್ರಕಥೆಗಳನ್ನು ಮಕ್ಕಳಿಗೆ ನೀಡಿ, ಅದನ್ನು ಸ್ಪಷ್ಟವಾಗಿ ತಪ್ಪಿಲ್ಲದಂತೆ ಓದಲು ತಿಳಿಸುವುದು. |
| | | | ➢ ಚಿತ್ರಕಥಾ ಸರಣಿಯ ಚಾರ್ಟ್ ಓದುವಿಕೆ. | |
| | | • ಸರಳ ಜಾಹಿರಾತುಗಳನ್ನು ಓದುತ್ತಾರೆ. | ➢ ನನ್ನ ಜಾಹಿರಾತು | ➢ ವಿದ್ಯಾರ್ಥಿಗಳಿಗೆ ಹಿಂದಿನ ತರಗತಿಯಲ್ಲೇ ಪ್ರತಿಯೊಬ್ಬರು, ಒಂದೊಂದು ಜಾಹಿರಾತಿಗೆ ಸಂಬಂಧಪಟ್ಟ ಪೋಸ್ಟರ್ ಗಳನ್ನು ತರಲು ಹೇಳುವುದು. ನಂತರ ಪ್ರತಿಯೊಬ್ಬರೂ ಅದನ್ನು ತರಗತಿಯಲ್ಲಿ ಪ್ರದರ್ಶಿಸಿ ತಪ್ಪಿಲ್ಲದಂತೆ ಸ್ಪಷ್ಟವಾಗಿ ಓದುವುದು. |
| | | | ➢ ವಾರ್ತಾಪತ್ರಿಕೆಯಲ್ಲಿ ಬರುವ ಜಾಹಿರಾತನ್ನು ಓದುವಿಕೆ. | |
| **17** | | • ಭಿತ್ತಿಪತ್ರಗಳನ್ನು ಸರಾಗವಾಗಿ , ಕ್ರಮಬದ್ಧವಾಗಿ ಓದುತ್ತಾರೆ. | ➢ ಇನ್ನಷ್ಟು ಓದು– ಇನ್ನಷ್ಟು ಅನುಸರಿಸು. | ➢ ತರಗತಿಯ ಗೋಡೆಗಳ ಮೇಲೆ ವಿವಿಧ ಭಾಗಗಳಲ್ಲಿ ಭಿತ್ತಿಪತ್ರಗಳನ್ನು ಮೊದಲೇ ಶಿಕ್ಷಕರು ಅಂಟಿಸುವುದು. ನಂತರ ಮಕ್ಕಳಿಗೆ ಎಲ್ಲೆಲ್ಲಿ ಭಿತ್ತಿಪತ್ರಗಳು ಇವೆಯೋ, ಅವನ್ನು ಹೆಕ್ಕಿ ತೆಗೆದುಕೊಂಡು ಬರಲು ಹೇಳುವುದು. ನಂತರ ವಿದ್ಯಾರ್ಥಿಗಳು ತಂದ ಭಿತ್ತಿಪತ್ರಗಳನ್ನು ಕ್ರಮಬದ್ಧವಾಗಿ ಓದಲು ಹೇಳುವುದು. ಉದಾ:–ಕಾಡು ಬೆಳೆಸಿ, ನಾಡು ಉಳಿಸಿ. |
| | | • ನಿಯತಕಾಲಿಕೆಗಳಲ್ಲಿ ಬರುವ ಸರಳ ಚಿತ್ರ ಸರಣಿಗಳನ್ನು ಓದಿ ಅರ್ಥೈಸಿಕೊಳ್ಳುವುದು. | ➢ ಕ್ರಮ–ಅನುಕ್ರಮ | ➢ ನಿಯತಕಾಲಿಕೆಗಳಲ್ಲಿ ಬರುವ ಚಿತ್ರಸರಣಿಗಳನ್ನು ವಿಭಾಗಿಸಿ, ಅದಲು ಬದಲು ಮಾಡಿ ಮಕ್ಕಳಿಗೆ ನೀಡುವುದು. ಅದನ್ನು ಕಥೆಗೆ ಸಂಬಂಧಿಸಿದಂತೆ ಅನುಕ್ರಮವಾಗಿ ಜೋಡಿಸಿ ಓದಿ ಅರ್ಥೈಸಿಕೊಳ್ಳುವುದು. |
| | | | ➢ ನನ್ನ ಚಿತ್ರ –ನನ್ನ ಸೂಚನೆ | ➢ ಚಿತ್ರದ ಮುಂದೆ ನೀಡಿರುವ ಸೂಚನೆಗಳನ್ನು ಓದಿ ಹೊಂದಿಸುವುದು. |

| | | | | |
|---|---|---|---|---|
| **18** | • ಕೈಬರಹದ ಪತ್ರ ಮತ್ತು ಇತರರ ಬರವಣಿಗೆಯನ್ನು ಓದುವುದು. | • ಕೈಬರಹದ ಪತ್ರಗಳನ್ನು ಸ್ಪಷ್ಟವಾಗಿ ಓದುತ್ತಾರೆ. | ➢ ಓಲೆ– ಮೇಘಮಾಲೆ | ➢ ವಿವಿಧ ರೀತಿಯ ಕೈಬರಹದ ಪತ್ರಗಳನ್ನು ಶಿಕ್ಷಕರು ಸಂಗ್ರಹಿಸುವುದು. ಅವುಗಳನ್ನು ವಿದ್ಯಾರ್ಥಿಗಳಿಗೆ ನೀಡಿ ಓದಲು ತಿಳಿಸುವುದು. ನಂತರ ಪ್ರತಿ ವಿದ್ಯಾರ್ಥಿಯು ತನಗೆ ನೀಡಿದ ಪತ್ರವನ್ನು ಓದಿದ ನಂತರ , ಮತ್ತೊಬ್ಬ ವಿದ್ಯಾರ್ಥಿಯ ಪತ್ರವನ್ನು ಪರಸ್ಪರ ವಿನಿಮಯ ಮಾಡಿಕೊಂಡು ಸ್ಪಷ್ಟವಾಗಿ ಓದುವುದು. |
| | | • ಇತರರ ಬರವಣಿಗೆಯನ್ನು ಅರ್ಥೈಸಿಕೊಂಡು ಓದುತ್ತಾರೆ. | ➢ ವಿಧಿಬರೆಹ – ಹಣೆಬರಹ | ➢ ವಿದ್ಯಾರ್ಥಿಗಳು ತಾವು ಬರೆದ ಕೈಬರಹದ ಒಂದು ಪ್ರತಿಯನ್ನು ರಿಬ್ಬನ್‌ನಿಂದ ತಮ್ಮ ಹಣೆಗೆ/ ತಲೆಗೆ ಕಟ್ಟಿಕೊಳ್ಳುವುದು. ಅದನ್ನು ಇತರೆ ಸಹಪಾಠಿಗಳು ಓದಲು ತಿಳಿಸುವುದು. |
| | | | ➢ ಮುದ್ರಿತ ಕರಪತ್ರದ ಓದು. | |
| **19** | | • ಇತರರ ಕೈಬರಹದ ಪುಸ್ತಕಗಳನ್ನು ಸರಾಗವಾಗಿ ಓದುತ್ತಾರೆ. | 1. ಕವಿವಾಣಿ | ➢ ಪ್ರಸಿದ್ಧ ಕವಿಗಳ ಬರಹಗಳು , ಹಿರಿಯ ಸಾಹಿತಿಗಳ ಕೈಬರಹಗಳಿರುವ ಗದ್ಯಪಾಠಗಳನ್ನು ವಿದ್ಯಾರ್ಥಿಗಳು ಸ್ಪಷ್ಟವಾಗಿ , ಕ್ರಮಬದ್ಧವಾಗಿ ಓದುವುದು. |
| | | | 2. ಅದಲು– ಬದಲು | ➢ ಸ್ನೇಹಿತರ ಕೈಬರಹದ ನೋಟ್‌ಬುಕ್‌ಗಳನ್ನು ಅದಲು–ಬದಲು ಮಾಡಿ ಓದಿಸುವುದು. |
| | | | 3. ಓದಿರಿ– ಲಗ್ನ ಪತ್ರಿಕೆ | ➢ ವಿದ್ಯಾರ್ಥಿಗಳು , ಮನೆಯಲ್ಲಿರುವ ಲಗ್ನಪತ್ರಿಕೆಗಳನ್ನು ತಂದು ಓದುವುದು. |
| **20** | • ಮಕ್ಕಳ ನಿಯತಕಾಲಿಕೆಗಳನ್ನು ಓದುವುದು. | • ಮಕ್ಕಳ ಕಥೆ, ಪ್ರಾಸಗೀತೆ, ಮನರಂಜನೆಯ ಚಿತ್ರಕಥೆಗಳನ್ನು ನಿರರ್ಗಳವಾಗಿ ಓದುತ್ತಾರೆ. | 1. ಪಂಚತಂತ್ರ ಕಥಾಮಾಲಿಕೆ<br>2. ಶಿಶುಗೀತೆ ವಾಚನ<br>3. ಮಕ್ಕಳ ಪುರವಣಿ ಓದು. | ➢ ಶಿಕ್ಷಕರು ನಿಯತಕಾಲಿಕೆಗಳಲ್ಲಿ ಬರುವ ಪಂಚತಂತ್ರ ಕಥೆಗಳು, ಮನರಂಜನಾ ಚಿತ್ರಕಥೆಗಳನ್ನು ಕ್ರೋಢೀಕರಿಸಿಕೊಂಡು ವಿದ್ಯಾರ್ಥಿಗಳಿಗೆ ನೀಡುವುದು. ಈ ಕಥೆಗಳನ್ನು ಸ್ಪಷ್ಟವಾಗಿ ನಿರರ್ಗಳವಾಗಿ ಓದುವುದು. |

| | | | | |
|---|---|---|---|---|
| **21** | • ಸುಮಾರು 4000 ಪದಗಳನ್ನು ಓದಿ ಗ್ರಹಿಸುವುದು. | • ಪಠ್ಯದಲ್ಲಿ ಬರುವ ಹೊಸ ಪದಗಳ ಅರ್ಥವನ್ನು ಪದಕೋಶಿಯಿಂದ ಓದಿ ತಿಳಿಯುತ್ತಾರೆ. | 1. ನವ–ನವೀನ | ➢ ಒಂದು ನಿದಿರ್ಷ್ಟ ಪಠ್ಯಭಾಗದಲ್ಲಿ ಬರುವ ಹೊಸಪದಗಳನ್ನು ವಿದ್ಯಾರ್ಥಿಗಲು ಗುರ್ತಿಸುವುದು. ಅವುಗಳಿಗೆ ಅರ್ಥವನ್ನು ಪದಕೋಶಿಯಿಂದ ಹುಡುಕಿ ಓದಿ , ಅರ್ಥೈಸಿಕೊಂಡು ಪಟ್ಟಿ ಮಾಡುವುದು. |
| | | | 2. ಚಲಿಸುವ ಚಂಡು | ➢ ಒಂದು ಚೆಂಡಿನ ಮೇಲೆ ಕೆಲವು ಹೊಸ ಪದಗಳನ್ನು ಕಾಗದದಲ್ಲಿ ಬರೆದು ಅಚಿಟಿಸುವುದು. ಮಕ್ಕಳು ವೃತ್ತಾಕಾರದಲ್ಲಿ ಕುಳಿತು ಚೆಂಡನ್ನು ಒಬ್ಬರಿಂದ ಮತ್ತೊಬ್ಬರಿಗೆ ಪಾಸ್ ಮಾಡುತ್ತಾ ಅಲ್ಲಿರುವ ಪದಗಳ ಕಾಗದ ತೆಗೆದು, ಅದನ್ನು ಓದಿ , ಅದಕ್ಕೆ ಸೂಕ್ತವಾದ ಅರ್ಥವನ್ನು ಹೇಳುವುದು. |
| **22** | | • ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಪದಕೋಶದಿಂದ ಹುಡುಕಿ , ಓದಿ ಅರ್ಥೈಸಿಕೊಳ್ಳುವರು | 1. ಸಮಾನ ಗೆಳೆಯರ ಅನ್ವೇಷಣೆ | ➢ ಪದಕೋಶ ಬಳಸುವ ಸರಿಯಾದ ಕ್ರಮವನ್ನು ಶಿಕ್ಷಕರು ವಿದ್ಯಾರ್ಥಿಗಳಿಗೆ ತಿಳಿಸುವುದು. ನಂತರ ಪಠ್ಯದಲ್ಲಿ ಬರುವ ಹೊಸಪದಗಳಿಗೆ ಸಮಾನಾರ್ಥಕ ಪದಗಳನ್ನು ಪದಕೋಶದ ಸಹಾಯದಿಂದ ವಿದ್ಯಾರ್ಥಿಗಳು ಹುಡುಕಿ ಬರೆಯುವುದು. |
| | | | 2. ಗೆರೆ ಎಳೆದು ಜೋಡಿಸು. | ➢ ಸಮಾನ ಅರ್ಥ ಕೊಡುವ ಪದಗಳನ್ನು ಗೆರೆ ಎಳೆದು ಜೋಡಿಸುವುದು. |
| | | | 3. ಆಲ್ಬಂ ತಯಾರಿಕೆ | ➢ ಸಮಾನಾರ್ಥಕ ಪದಗಳನ್ನು ಬರೆದಿರುವ ಒಂದು ಪುಟ್ಟ ಆಲ್ಬಂನ್ನು ವಿದ್ಯಾರ್ಥಿಗಳು ತಯಾರಿಸುವುದು. |
| **23** | • ಪಠ್ಯದಲ್ಲಿನ ವಿಚಾರ ಸರಣಿ ಮತ್ತು ಘಟನಾವಳಿಗಳಲ್ಲಿರುವ ಸರಳ ಕಾರ್ಯಕಾರಣ ಸಂಬಂಧಗಳನ್ನು ಹೇಳುವುದು. | • ಘಟನೆಗಳಿಗೆ ಕಾರಣ , ಪರಿಣಮಗಳನ್ನು ತಿಳಿಯುತ್ತಾರೆ. | 1. ಅಣುಕು – ತಿಣುಕು<br>2. ಕಥನ ಕವನ ಓದುವುದು<br>3. ದೈನಂದಿನ ಜೀವನದ ಘಟನೆಗಳ ಬಗ್ಗೆ ಓದುವುದು. | ➢ ರಸ್ತೆ ಅಪಘಾತ , ಹೆಲ್ಮೆಟ್ ಧರಿಸದೆ ವಾಹನ ಚಾಲನೆ ಮಾಡುವುದು, ಅಗ್ನಿ ನಿವಾರಣೆ ಮುಂತಾದ ಘಟನೆಗಳ ಕುರಿತು ತರಗತಿಯಲ್ಲಿ ಅಣುಕು ಪ್ರದರ್ಶನ ಏರ್ಪಡಿಸುವುದು. ಇವುಗಳಿಗೆ ಸೂಕ್ತವಾದ ಕಾರ್ಯಕಾರಣ ಸಂಬಂಧವನ್ನು ಹೇಳುವುದು. |

| ದಿನ | ಅಪೇಕ್ಷಿತ ಕಲಿಕಾ ಫಲಗಳು | ಕಲಿಕಾಂಶಗಳು | ಸಲಹಾತ್ಮಕ ಚಟುವಟಿಕೆಗಳು | ಚಟುವಟಿಕೆಗಳ ನಿರ್ವಹಣೆಗಾಗಿ ಸೂಚನೆಗಳು |
|---|---|---|---|---|
| **24** | **ಕ್ಷೇತ್ರ; – ಬರವಣಿಗೆ**<br>ಅಚ್ಚುಕಟ್ಟಾಗಿ ಮತ್ತು ಸ್ಪುಟವಾಗಿ ಬರೆಯುವುದು. | ಅಕ್ಷರಗಳ ಸರಿಯಾದ ಆಕಾರದೊಂದಿಗೆ ಪದಗಳನ್ನು ತಪ್ಪಿಲ್ಲದಂತೆ ಬರೆಯುತ್ತಾರೆ. | ಕೊರೆ– ಬರೆ<br>ಅಂದದಿ ಅಕ್ಷರ ಬರೆಯೋಣ ಬಾರಾ | ರಬ್ಬರ್ ಹಾಳೆ, ರಟ್ಟು, ಹಾಳೆ ಇದರಲ್ಲಿ ಯಾವುದು ಲಭ್ಯವಿದೆಯೋ ಅದರಲ್ಲಿ ಮಕ್ಕಳು ಅಂದವಾಗಿ ತಮ್ಮ ಹೆಸರು, ಶಾಲೆಯ ಹೆಸರನ್ನು ಬರೆದು ಕೊರೆಯುವಂತೆ ಶಿಕ್ಷಕರು ಮಕ್ಕಳಿಗೆ ಅನುಕೂಲಿಸುವುದು. |
| **25** | | ಅಕ್ಷರ ಮತ್ತು ಪದಗಳನ್ನು ಸೂಕ್ತ ಅಂತರದೊಂದಿಗೆ ಅಚ್ಚುಕಟ್ಟಾಗಿ ಮತ್ತು ಸ್ಪುಟವಾಗಿ ಬರೆಯುವುದು. | ನೋಡಿ ಬರೆ – ಬಳಸಿ ಗೆರೆ<br>ಕಾಫಿಪುಸ್ತಕ ಬರವಣಿಗೆ. | ಶಿಕ್ಷಕರು ಕಪ್ಪುಹಲಗೆಯ ಮೇಲೆ ಕಾಫಿ ಪುಸ್ತಕದಂತೆ ಗೆರೆ ಎಳೆದ ಆಯ್ದಾ ಪ್ಯಾರಾವನ್ನು ತರಗತಿಯ ಎಲ್ಲಾ ಮಕ್ಕಳಿಗೂ ಕಾಣುವಂತೆ ಅಂದವಾಗಿ ನಿಯಮದಂತೆ ಗೆರೆಗಳಲ್ಲಿ ಬರೆಯುವುದು. ನಂತರ ಮತ್ತೊಮ್ಮೆ ಕಪ್ಪುಹಲಗೆಯ ಮೇಲೆ ಗೆರೆ ಎಳೆದು ತಾವು ಬರೆದ ಪ್ಯಾರಾದಲ್ಲಿನ ಒಂದೊಂದು ಪದವನ್ನು ಒಬ್ಬೊಬ್ಬ ವಿದ್ಯಾರ್ಥಿಯಿಂದ ಕಪ್ಪುಹಲಗೆಯ ಮೇಲೆ ಬರೆಸುವುದು. ಈಗಾಗಲೇ ಶಿಕ್ಷಕರು ಬರೆದಿಟ್ಟುಕೊಂಡಿರುವ ಕಾಫಿ ಪುಸ್ತಕದ ಮಾದರಿ ಬರಹವನ್ನು ಮಕ್ಕಳ ಗುಂಪಿಗೆ ನೀಡಿ ಬರೆಯಿಸುವದು. |
| **26** | ಲೇಖನ ಚಿಹ್ನೆಗಳನ್ನು ಬಳಸಿ ಬರೆಯುವುದು | ಲೇಖನ ಚಿಹ್ನೆಗಳನ್ನು ಅವುಗಳ ಸರಿಯಾದ ವಿನ್ಯಾಸದಂತೆ ಬರೆಯುತ್ತಾರೆ. | ಬಿಟ್ಟ ಗುರುತು–ಬರೆ ಕುಳಿತು.<br>ಚಿಹ್ನೆ ಹಚ್ಚು | ಲೇಖನ ಚಿನ್ಹೆ ರಹಿತ ಪ್ಯಾರಾ ಒಂದನ್ನು ಶಿಕ್ಷಕರು ಕಪ್ಪುಹಲಗೆಯ ಮೇಲೆ ಬರೆದು ಮಕ್ಕಳು ಗಮನಿಸುವಂತೆ ಸ್ವರಭಾರ ಯುಕ್ತವಾಗಿ ಓದುತ್ತಾ ಅಗತ್ಯವಿರುವಲ್ಲಿ ಸೂಕ್ತ ಲೇಖನ ಚಿಹ್ನೆಗಳನ್ನು ಸರಿಯಾದ ವಿನ್ಯಾಸದಲ್ಲಿ ಬರೆದು ಮಕ್ಕಳಿಗೆ ತೋರಿಸುವುದು. ಹೀಗೆ ಮೂರ್ನಾಲ್ಕು ಪ್ಯಾರಾವನ್ನು ಕಪ್ಪು ಹಲಗೆಯ ಮೇಲೆ ಬರೆದು ಲೇಖನ ಚಿಹ್ನೆ ಹಾಕುವುದು. ಮಕ್ಕಳನ್ನು ಗುಂಪಿನಲ್ಲಿ ಕೂರಿಸಿ ಅಭ್ಯಾಸ ಹಾಳೆ ಕೊಟ್ಟು ಲೇಖನ ಚಿಹ್ನೆ ಹಾಕಿಸುವುದು. |
| **27** | | ಲೇಖನ ಚಿಹ್ನೆಗಳನ್ನು ಪದಗಳಲ್ಲಿ ಬಳಸಿ ಬರೆಯುತ್ತಾರೆ. | • ಪದಕ್ಕೊಂದು ಚಿಹ್ನೆ ಬರೆಯೋಣ ಜಾಣೆ<br>•<br>ʼಂದದ ಬರಹ | ಶಿಕ್ಷಕರು ಮಾದರಿಯಾಗಿ ಆಯ್ದ ಪದಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ಅವುಗಳನ್ನು ಧ್ವನಿ ಏರಿಳಿತದೊಂದಿಗೇ ಓದುತ್ತಾ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕುವುದು. ನಂತರ ವಿದ್ಯಾರ್ಥಿಗಳಿಗೆ ಲೇಖನ ಚಿನ್ಹೆ ಒಳಗೊಂಡ ಪದದ ಉಕ್ತಲೇಖನ ನೀಡಿ ಮೌಲ್ಯಮಾಪನ ಮಾಡುವುದು.<br>ಉದಾಹರಣೆಗೆ:– ಆಹಾ! ಯಾರು? ಬನ್ನಿ.<br>“ಇದು ನಿನ್ನದಾ” ಇತ್ಯಾದಿ |

<table>
<tr><td>28</td><td rowspan="2">ಸರಳ ಕ್ರಿಯಾತ್ಮಕ ನಿಯಮಗಳನ್ನು ಅರ್ಥ ಮಾಡಿಕೊಂಡು ವಾಕ್ಯಗಳನ್ನು ರಚಿಸುವರು.</td><td>ನಾಮಪದ ಮತ್ತು ಕ್ರಿಯಾಪದಗಳನ್ನು ಬಳಸಿಕೊಂಡು ವಾಕ್ಯಗಳನ್ನು ರಚಿಸುತ್ತಾರೆ.</td><td>ನನ್ನನ್ನು ಬಳಸು– ವಾಕ್ಯ ರಚಿಸು.<br><br>ವಾಕ್ಯ ರಚನೆ ಮಾಡು ಜಾಣೆ</td><td>ಶಿಕ್ಷಕರು ನಾಮಪದ ಮತ್ತು ಕ್ರಿಯಾಪದಗಳನ್ನು ಬಳಸಿ ಮಾದರಿ ವಾಕ್ಯಗಳನ್ನು ರಚಿಸಿ ಕಪ್ಪುಹಲಗೆಯ ಮೇಲೆ ಬರೆಯುವುದು. ನಂತರ ವಿದ್ಯಾರ್ಥಿಗಳ ಗುಂಪಿಗೆ ನಾಮಪದ ಮತ್ತು ಕ್ರಿಯಾಪದಗಳ ಮಿಂಚು ಪಟ್ಟಿಗಳನ್ನು ನೀಡಿ ಮಕ್ಕಳು ಸೂಕ್ತ ವಾಕ್ಯಗಳನ್ನು ರಚಿಸುವಂತೆ ಪ್ರೇರೇಪಿಸುವುದು.
<table>
<tr><th>ನಾಮಪದ</th><th>ಕ್ರಿಯಾಪದ</th></tr>
<tr><td>ಮಾಸ್ಕ್, ಸಿಂಹವು</td><td>ಹತ್ತಿದರು</td></tr>
<tr><td>ಬೆಟ್ಟ, ರೋಹಿಣಿ</td><td>ಘರ್ಜಿಸಿತು.</td></tr>
<tr><td>ಅವರು</td><td>ಧರಿಸಿದ್ದಾಳೆ</td></tr>
</table>
ವಾಕ್ಯ 1:– ರೋಹಿಣಿ ಮಾಸ್ಕ್ ಧರಿಸಿದ್ದಾಳೆ.<br>ವಾಕ್ಯ 2:– ಅವರು ಬೆಟ್ಟ ಹತ್ತಿದರು.<br>ವಾಕ್ಯ 3:– ಸಿಂಹವು ಘರ್ಜಿಸಿತು... ಇತ್ಯಾದಿ</td></tr>
<tr><td>29</td><td>ವಿಷಯಯೊಂದಕ್ಕೆ ಕ್ರಿಯಾತ್ಮಕ ನಿಯಮಗಳನ್ನು ಅನುಸರಿಸಿ, ತಪ್ಪಿಲ್ಲದಂತೆ ವಾಕ್ಯಗಳನ್ನು ಬರೆಯುತ್ತಾರೆ.</td><td>ಬಯಕೆಯ ಬರಹ<br><br>ವಿಷಯ– ವಿವರ</td><td>ಶಿಕ್ಷಕರು ವಿದ್ಯಾರ್ಥಿಗಳಿಗೆ ತುಂಬಾ ಪರಿಚಿತವಿರುವ ವಿಷಯಗಳನ್ನು ಕಪ್ಪು ಹಲಗೆಯ ಮೇಲೆ ಬರೆದು ವಿದ್ಯಾರ್ಥಿಯು ಅವುಗಳಲ್ಲಿ ತಮಗಿಷ್ಟವಾದ ಯಾವುದಾದರೊಂದು ವಿಷಯದ ಬಗ್ಗೆ8–10 ವಾಕ್ಯದಲ್ಲಿ ಬರೆಯುವಂತೆ ತಿಳಿಸಿ ಬರಹವನ್ನು ಗಮನಿಸುವುದು.<br>ಉದಾಹರಣೆ:– ನಮ್ಮ ಮನೆ, ನನ್ನ ಶಾಲೆ, ನನ್ನ ಊರು.. ಇತ್ಯಾದಿ.</td></tr>
<tr><td>30</td><td rowspan="2">ಸೃಜನಾತ್ಮಕ ಬರಹವನ್ನು ಮೈಗೂಡಿಸಿಕೊಳ್ಳುವರು.</td><td>ಇತರರ ಸುಂದರ ಕೈಬರಹಗಳನ್ನು ಮೆಚ್ಚಿ ಅನುಸರಿಸುತ್ತಾರೆ.</td><td>ಬರಹ – ವಿವಿಧ ತರಹ<br><br>ನನ್ನ ಕೈ ಬರಹ</td><td>ಶಿಕ್ಷಕರು ಈಗಾಗಲೇ ಸಂಗ್ರಹಿಸಿಟ್ಟು ಕೊಂಡಿರುವ ಇತರರ ಸುಂದರ ಕೈಬರಹದ ಮಾದರಿ ಪ್ರತಿಗಳನ್ನು ಮಕ್ಕಳ ಗುಂಪಿಗೆ ಕೊಟ್ಟು ಬರವಣಿಗೆ ಬಗ್ಗೆ ಚರ್ಚಿಸಿ ಅಭಿಪ್ರಾಯ ವ್ಯಕ್ತಪಡಿಸಲು ಅವಕಾಶ ನೀಡುವುದು. ನಂತರ ಮಕ್ಕಳು ಪುಸ್ತಕ ತೆರೆದು ಅದರಲ್ಲಿನ ಪ್ಯಾರ ಒಂದನ್ನು ಅಂದವಾಗಿ ಬರೆಯುವಂತೆ ಪ್ರೇರೇಪಿಸುವುದು.</td></tr>
<tr><td>31</td><td>ಸೃಜನಾತ್ಮಕವಾಗಿ ಹಾಡು ಕಥೆಗಳನ್ನು ರಚಿಸುತ್ತಾರೆ.</td><td>ಕವಿ ಸಮಯ<br><br>ನನ್ನ ಹಾಡು ನನ್ನದು</td><td>ಶಿಕ್ಷಕರು ವಿದ್ಯಾರ್ಥಿಗಳಿಗೆ ಮುದನೀಡುವ ಪುಟ್ಟ ಶಿಶುಗೀತೆ, ಕಥೆ ಹೇಳಿ ನಂತರ ಕೆಲವು ಪದಗಳನ್ನು ಕಪ್ಪು ಹಲಗೆ ಮೇಲೆ ಬರೆದು ಅವುಗಳನ್ನು ಬಳಸಿ ಹಾಡು ಕಥೆ ಬರೆಯುವಂತೆ ಮಕ್ಕಳಿಗೆ ಅನುಕೂಲಿಸಿ ಪ್ರೋತ್ಸಾಹಿಸುವುದು.</td></tr>
</table>